**ಕರ್ನಾಟಕಸರ್ಕಾರ**

*ನಿರ್ದೇಶಕರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12*

ಸಂಖ್ಯೆ: ಪಪೂಶಿ\ಲೆಪ-3\ವಿಜಾಸಂ\2014-15 ದಿನಾಂಕ: 19-09-2014.

## ಅನುದಾನ ಬಿಡುಗಡೆ ಆದೇಶ

ವಿಷಯ:- ವಿಶೇಷ ಜಾಗೃತದಳದ ಸದಸ್ಯರ ಸಂಭಾವನೆ ಮತ್ತು ಪ್ರಯಾಣ ಭತ್ಯೆ ಬಿಲ್ಲುಗಳಿಗೆ ಅಗತ್ಯವಿರುವ ಅನುದಾನದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಫ್‌ಡಿ 03 ಬಿಪಿಇ 2014, ಬೆಂಗಳೂರು, ದಿನಾಂಕ: 07-03-2014.

2) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಫ್‌ಡಿ 07 ಬಿಪಿಇ 2014, ಬೆಂಗಳೂರು, ದಿನಾಂಕ: 31-07-2014.

3) ಸರ್ಕಾರದ ಆದೇಶ ಸಂಖ್ಯೆ: ED 40 TPU 2013, ದಿನಾಂಕ: 21-06-2013

# # # # # # #

2014ನೇ ಸಾಲಿನ ಮಾರ್ಚ್ ಮತ್ತು ಜುಲೈ ತಿಂಗಳಿನಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಹಾಗೂ ಪೂರಕ ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸಿದ ವಿಶೇಷ ಜಾಗೃತದಳ, ತಹಸೀಲ್ದಾರರು, ಪ್ರಶ್ನೆ ಪತ್ರಿಕಾ ಪಾಲನಾ ಅಧಿಕಾರಿಗಳು, ಖಜಾನಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಇತರೇ ಸಿಬ್ಬಂದಿಯವರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಹಾಗೂ ಸಂಭಾವನೆ ಬಿಲ್ಲುಗಳು ಹಾಗೂ 2013-14ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಹಾಗೂ ಪೂರಕ ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸಿದ ಅಧಿಕಾರಿಗಳು/ಸಿಬ್ಬಂದಿಯವರ ಬಿಲ್ಲುಗಳನ್ನು ಖಜಾನೆಗೆ ವಿಳಂಬವಾಗಿ ಸಲ್ಲಿಸಿದ್ದರಿಂದ/ಅನುದಾನ ಕೊರತೆಯಿಂದ ಪಾವತಿಗೆ ಬಾಕಿಯಿದ್ದ ಪ್ರಯಾಣಭತ್ಯೆ, ಸಂಭಾವನೆ ಬಿಲ್ಲುಗಳೂ ಸೇರಿದಂತೆ ಪಾವತಿ ವೆಚ್ಚ ಭರಿಸಲು ಲೆಕ್ಕ ಶೀರ್ಷಿಕೆ "2202-02-108-0-01 (ಯೋಜನೇತರ)" ಅಡಿಯಲ್ಲಿ ಈ ಕೆಳಕಂಡ ಸವಿವರ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಿದೆ.

| ಕ್ರಸಂ | ಜಿಲ್ಲೆಯ ಹೆಸರು | ಬಿಡುಗಡೆಗೊಳಿಸಿರುವ ಅನುದಾನ (ರೂ. ಗಳಲ್ಲಿ) | |
|---|---|---|---|
| | | 015 (ಸಂಭಾವನೆ) | 041 (ಪ್ರಯಾಣವೆಚ್ಚ) |
| 1. | ಬೆಂಗಳೂರು ಗ್ರಾಮಾಂತರ | 584259 | 464572 |
| 2. | ಬೆಳಗಾಂ | 2209614 | 2172295 |
| 3. | ಬಾಗಲಕೋಟೆ | 981830 | 1680271 |
| 4. | ಬಿಜಾಪುರ | 1299698 | 1670400 |
| 5. | ಬೀದರ್ | 1250000 | 1450000 |
| 6. | ದಾವಣಗೆರೆ | 500000 | 731000 |
| 7. | ಚಿತ್ರದುರ್ಗ | 1432392 | 724230 |
| 8. | ಚಿಕ್ಕಮಗಳೂರು | 1156753 | 1481000 |

| | | | |
|---|---|---|---|
| 9. | ಧಾರವಾಡ | 1800000 | 1600000 |
| 10. | ಗುಲ್ಬರ್ಗಾ | 1400000 | 2000000 |
| 11. | ಹಾಸನ | 1600000 | 3200000 |
| 12. | ಕೋಲಾರ | 950000 | 1080000 |
| 13. | ಚಾಮರಾಜನಗರ | 582274 | 706027 |
| 14. | ಮೈಸೂರು | 1500000 | 1500000 |
| 15. | ಮಂಡ್ಯ | 1250000 | 1900000 |
| 16. | ಉತ್ತರ ಕನ್ನಡ | 1005606 | 1369327 |
| 17. | ಉಡುಪಿ | 578309 | 714012 |
| 18. | ದಕ್ಷಿಣ ಕನ್ನಡ | 1750679 | 825868 |
| 19. | ಶಿವಮೊಗ್ಗ | 1230423 | 1110798 |
| 20. | ಕೊಡಗು | 526623 | 414513 |
| 21. | ಚಿಕ್ಕಬಳ್ಳಾಪುರ | 700000 | 800000 |
| 22. | ರಾಮನಗರ | 443418 | 1004756 |
| | ಒಟ್ಟು | **24731878** | **28599069** |

<u>ಬಿಡುಗಡೆ ಮಾಡಲಾದ ಅನುದಾನದ ಒಟ್ಟು ಮೊತ್ತ ಅಕ್ಷರಗಳಲ್ಲಿ:</u>

1. ಲೆಕ್ಕ ಶೀರ್ಷಿಕೆ "2202-02-108-0-01-015 NP: (ಸಂಭಾವನೆ ವೆಚ್ಚ) ರೂ. **2,47,31,878**
**ರೂಪಾಯಿ ಎರಡು ಕೋಟಿ ನಲವತ್ತೇಳು ಲಕ್ಷ ಮೂವತ್ತೊಂದು ಸಾವಿರ ಎಂಟು ನೂರ ಎಪ್ಪತ್ತೆಂಟು ಮಾತ್ರ**

2.ಲೆಕ್ಕ ಶೀರ್ಷಿಕೆ "2202-02-108-0-01-041 NP (ಪ್ರಯಾಣ ವೆಚ್ಚ) **2,85,99,069**
**ರೂಪಾಯಿ ಎರಡು ಕೋಟಿ ಎಂಭತ್ತೈದು ಲಕ್ಷ ತೊಂಭತ್ತೊಂಭತ್ತು ಸಾವಿರದ ಅರವತ್ತೊಂಭತ್ತು ಮಾತ್ರ**

<u>ಸೂಚನೆಗಳು:-</u>

1. ಸಂಬಂಧಿಸಿದ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖಾ ಉಪನಿರ್ದೇಶಕರು ಈ ಆದೇಶದಲ್ಲಿ ಉಪಶೀರ್ಷಿಕೆ- 041 ಅಡಿ ಬಿಡುಗಡೆ ಮಾಡಿರುವ ಅನುದಾನವನ್ನು ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸಿದ ಸಿಬ್ಬಂದಿಯವರ ಪ್ರಯಾಣ ಭತ್ಯೆ, ದಿನಭತ್ಯೆಯ ವೆಚ್ಚ ಭರಿಸಲು ಮಾತ್ರ ಉಪಯೋಗಿಸತಕ್ಕದ್ದು. ಹಾಗೂ ಉಪ ಶೀರ್ಷಿಕೆ-015 ರಲ್ಲಿ ವಿಶೇಷ ಜಾಗೃತದಳ, ತಹಸೀಲ್ದಾರರು, ಪ್ರಶ್ನೆ ಪತ್ರಿಕಾ ಪಾಲನಾ ಅಧಿಕಾರಿಗಳು, ಖಜಾನಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಇತರೇ ಸಿಬ್ಬಂದಿಯವರಿಗೆ ಸಂಭಾವನೆಯನ್ನು ಪಾವತಿಸಲು ಮಾತ್ರ ವೆಚ್ಚ ಭರಿಸಲು ಉಪಯೋಗಿಸತಕ್ಕದ್ದು.

2. ಸದರಿ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿರುವ ಅನುದಾನವು ಜಿಲ್ಲಾ ಉಪನಿರ್ದೇಶಕರ ಈವರೆಗಿನ ಅಗತ್ಯತೆ/ಕೋರಿಕೆಯನ್ನು ಪರಿಗಣಿಸಿ ಉಪಶೀರ್ಷಿಕೆ 015 ರಲ್ಲಿ ಪೂರ್ಣ ಪ್ರಮಾಣದಲ್ಲಿ ಹಾಗೂ ಉಪಶೀರ್ಷಿಕೆ 041ರಲ್ಲಿ ಮಾರ್ಚ್ 2013ರ ಪರೀಕ್ಷಾ ವೆಚ್ಚ ಹಾಗೂ ಹಿಂದಿನ ಬಾಕಿ ಬಿಲ್ಲುಗಳ ವೆಚ್ಚಕ್ಕಾಗಿ ಬಿಡುಗಡೆಗೊಳಿಸಲಾಗಿರುತ್ತದೆ.

3. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ ಇಡಿ 40 ಟಿಪಿಯು 2013, ದಿನಾಂಕ: 21-06-2013 ರಲ್ಲಿ ನಿಗಧಿಪಡಿಸಿರುವಂತೆ ದಿನಾಂಕ 21-06-2013ರ ನಂತರ ನಡೆಸಲ್ಪಟ್ಟ ದ್ವಿತೀಯ ಪಿ.ಯು.ಸಿ ಪರೀಕ್ಷಾ ಕಾರ್ಯಗಳಿಗೆ ನಿಯೋಜಿತರಾಗಿದ್ದ ಸಂಭಾವನೆ ಮತ್ತು ದಿನಭತ್ಯೆಗಳನ್ನು ಪರಿಗಣಿಸುವುದು ಹಾಗೂ ಪ್ರಯಾಣಕ್ಕೆ ಸಂಭಂದಿಸಿದಂತೆ ಪಾವತಿಸಬೇಕಾದ ಬಸ್ ಪ್ರಯಾಣದರವನ್ನು ವಾಸ್ತವ ಕಿ.ಮೀ.ಗಳಿಗನುಸಾರವಾಗಿ ಭರಿಸಿದ ದರವನ್ನು ಮಾತ್ರ ಪರಿಗಣಿಸಿ ಪಾವತಿಸತಕ್ಕದ್ದು.

---3

4. ಜಾಗೃತದಳದಲ್ಲಿ ಕೆಲಸ ನಿರ್ವಹಿಸಲು ನಿರ್ದೇಶನಾಲಯದ ಪರೀಕ್ಷಾ ಶಾಖೆಯಿಂದ ನೀಡಲಾಗಿರುವ ಆದೇಶಗಳನ್ವಯ ಪರಿಶೀಲಿಸಿ ಸಂಬಂಧಿಸಿದ ಬಿಲ್ಲುಗಳನ್ನು ವಿಲೇವಾರಿ ಮಾಡುವುದು.

5. ಜಾಗೃತದಳದ ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ ಇನ್ನಿತರೆ ಷರತ್ತುಗಳನ್ನು ವಿಧಿಸಿದ್ದಲ್ಲಿ ಅವುಗಳನ್ನು ಪರಿಶೀಲಿಸಿಕೊಂಡು ಬಿಲ್ಲುಗಳನ್ನು ವಿಲೇವಾರಿ ಮಾಡುವುದು.

6. ಪಾವತಿಗೆ ಸಂಬಂಧಿಸಿದಂತೆ ಇಲಾಖೆಯ ಅಧಿಕಾರಿಗಳು ಹಾಗೂ ಮಹಾಲೇಖಪಾಲರ ತಪಾಸಣೆಯಲ್ಲಿ ಹೆಚ್ಚುವರಿ/ಅನಧೀಕೃತ ಪಾವತಿ ಗುರುತಿಸಿದಲ್ಲಿ ಅದರ ವಸೂಲಾತಿಗೆ ಸಂಬಂಧಿಸಿದ ಉಪನಿರ್ದೇಶಕರದ್ದೇ ಹೊಣೆಗಾರಿಕೆಯಾಗಿರುತ್ತದೆ.

7. ಸಂಭಾವನೆ ಮತ್ತು ಪ್ರಯಾಣಭತ್ಯೆ ಬಿಲ್ಲುಗಳನ್ನು ಒದಗಿಸಿದ ಅನುದಾನದ ಮಿತಿಗೆ ಒಳಪಟ್ಟು ದಿನಾಂಕ 20-10-2014ರೊಳಗೆ ಪಾವತಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.

8. ಈ ಅನುದಾನ ಬಳಕೆ ಪ್ರಮಾಣ ಪತ್ರಗಳನ್ನು ಹಾಗೂ ವೆಚ್ಚಗಳ ನಿರ್ವಹಣೆಯ ನಂತರ ಅನುದಾನ ಬಳಕೆಯಾಗದೇ ಉಳಿದಿದ್ದಲ್ಲಿ ಸದರಿ ಮಾಹಿತಿಯನ್ನು ಲೆಕ್ಕಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರಿಗೆ ದಿ: 20-10-2014 ರೊಳಗೆ ತಲುಪುವಂತೆ ಕಳುಹಿಸಲು ಸೂಚಿಸಿದೆ.

Jyothi M

ನಿರ್ದೇಶಕರ ಪರವಾಗಿ,
ಪದವಿಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1 ಉಪನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ .
2 ಸಂಬಂಧಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3 ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ನಿರ್ದೇಶಕರ ಕಛೇರಿ ಪ.ಪೂ.ಶಿ.ಇ. ಬೆಂಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ.
4 ಕಛೇರಿ ಪ್ರತಿ.